# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

## ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ, ಹೊರಮಾವು ಉಪ ವಿಭಾಗ,

## ಮಹದೇವಪುರ ವಲಯ, ಬೆಂಗಳೂರು – 560 113.

ಸಂಖ್ಯೆ:ಬಿಬಿಎಂಪಿ/ಸ.ಕಾ.ಅ/ಹೊಉವಿ/ಪಿಆರ್/    /2021-22    ದಿನಾಂಕ: 25.05.2021

ಮಾನ್ಯ ಆಯುಕ್ತರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಕಛೇರಿ ಆದೇಶ ಸಂಖ್ಯೆ:ಪಿ/2(5)ಏಆರ್/35/2020-21 ದಿನಾಂಕ:21/09/2020 ರ ಆದೇಶದಂತೆ ಹೊರಮಾವು ವಾರ್ಡ್ ಸಂಖ್ಯೆ-25 ರ ನೋಡಲ್ ಅಧಿಕಾರಿಯಾದ ಶ್ರೀಮತಿ.ಸರೋಜಾದೇವಿ ಉಪ ಆಯುಕ್ತರು (ಮಹದೇವಪುರ) ರವರ ಅಧ್ಯಕ್ಷತೆಯಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಹಾಗೂ ರಾಜ್ಯ ಮಟ್ಟದ ಪ್ರಕೃತಿ ವಿಕೋಪದ ಸಮಿತಿಯ ಸದಸ್ಯ ಕಾರ್ಯದರ್ಶಿಯವರು ಕೋವಿಡ್-19 ನಿಯಂತ್ರಣ ಸಂಬಂಧ ವಾರ್ಡ್ ಮಟ್ಟದ ಕೋವಿಡ್ ನಿರ್ವಹಣಾ ಸಮಿತಿ ರಚಿಸಿ Ward Committe/Ward Decentralizes Triage and Emergency Response(DETER) Committiee for COVID-19 Management (WDC) ಅನ್ನು ಸ್ಥಾಪಿಸಲು ಹಾಗೂ ಕೋವಿಡ್-19 ನಿಯಂತ್ರಣ ಸಂಬಂಧ ಚರ್ಚಿಸಲು ನೋಡಲ್ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ವಾರ್ಡ್ ಮಟ್ಟದ ವಾರ್ಡ್ ಮಟ್ಟದ ಕೋವಿಡ್ ನಿರ್ವಹಣಾ ಸಮಿತಿ ಸಭೆಯನ್ನು ಕರೆಯಲಾಗಿದ್ದು, ದಿನಾಂಕ:-24.05.2021 ರಂದು ಅಪರಾಹ್ನ 12.00ಗಂಟೆಗೆ **https://meet.google.com/ouu-qwro-wpk** ರಲ್ಲಿ ಸಭೆಯನ್ನು ಏರ್ಪಡಿಸಲಾಗಿದ್ದು, ಸಭೆಯ ನಡವಳಿಗಳು ಈ ಕೆಳಕಂಡಂತಿರುತ್ತವೆ.

**ಉಪಸ್ಥಿತರು:**

| ಕ್ರ.ಸಂ | ಹೆಸರು | ಹುದ್ದೆ | ಮೊಬೈಲ್ ಸಂಖ್ಯೆ |
|---|---|---|---|
| | | ಅಧಿಕಾರಿಗಳು | |
| 1 | ಶ್ರೀಮತಿ.ಸರೋಜಾದೇವಿ | ನೋಡಲ್ ಅಧಿಕಾರಿ ವಾ.ನಂ.25 ಹಾಗೂ ಉಪ ಆಯುಕ್ತರು (ಮಹದೇವಪುರ) | 9480684059 |
| 2 | ಶ್ರೀ. ಸಂಜಯ್ ಕುಮಾರ್ | ಹಿರಿಯ ಆರೋಗ್ಯ ಪರಿವೀಕ್ಷಕರು (ವಾ.ನಂ.25) | 9742919411 |
| 3 | ಶ್ರೀ.ವಿನೋದ್ ಕುಮಾರ್ | ಕಂದಾಯ ಪರಿವೀಕ್ಷಕರು (ವಾ.ನಂ.25) | 9900116515 |
| 4 | ಶ್ರೀ.ಬಿ.ತಿಮ್ಮಪ್ಪ | ಕಂದಾಯ ಪರಿವೀಕ್ಷಕರು (ವಾ.ನಂ.25) | 9738706707 |
| 5 | ಶ್ರೀ.ನಾರಾಯಣಸ್ವಾಮಿ | ಕಂದಾಯ ಪರಿವೀಕ್ಷಕರು (ವಾ.ನಂ.25) | 9880817757 |
| 6 | ಶ್ರೀಮತಿ.ಶ್ರೀದೇವಿಕಾರ್ತಿಕ್ | ವ್ಯವಸ್ಥಾಪಕರು | 8792328064 |
| 7 | ಕೆ.ಆರ್.ಪುರಂ ಟ್ರಾಫಿಕ್ ಪೋಲೀಸ್ | ಸಂಚಾರ ಪೋಲೀಸ್ | |
| 8 | ಶ್ರೀ.ಸುನೀಲ್ ಥಾಮಸ್ | ಆರ್.ಡಬ್ಲ್ಯೂ.ಎ (ವಾ.ನಂ.25) | |
| 9 | ಶ್ರೀಮತಿ.ಸಿಂಧುಜಾನ್ | ಆರ್.ಡಬ್ಲ್ಯೂ.ಎ (ವಾ.ನಂ.25) | |
| 10 | ಶ್ರೀ.ಆರ್ಮುಗಂ ದಾಮೋದರನ್ | ಆರ್.ಡಬ್ಲ್ಯೂ.ಎ (ವಾ.ನಂ.25) | |
| 11 | ಶ್ರೀ.ಅಬ್ರಹಾಂ ಜೇಬ್ | (ವಾ.ನಂ.25) | |
| 12 | ಶ್ರೀ.ರಾಮಾಂಜನಪ್ಪ | (ವಾ.ನಂ.25) | |

**ವಾರ್ಡ್ ಸಮಸ್ಯೆಗಳ ಬಗ್ಗೆ ಚರ್ಚೆ:-**

**ಶ್ರೀ.ಸುನೀಲ್ ಥಾಮಸ್ (Volunteer)**- ರವರು ವೆಲ್ಫೇರ್ ಅಸೋಸಿಯೇಷನ್ ರವರ ಪರವಾಗಿ ಮಾತನಾಡುತ್ತಾ, ಕೋವಿಡ್ ಪ್ರಕರಣಗಳಿಗೆ ಅತಿಮುಖ್ಯವಾಗಿ ಪ್ರೈಮರಿ ಕಂಟ್ಯಾಕ್ಟ್ ಪರ್ಸನ್‌ಗಳಿಗೆ ವಸತಿ ಸಮುಚ್ಚಯಗಳಲ್ಲಿ ಸ್ವಾಬ್ ಟೆಸ್ಟಿಂಗ್/ವ್ಯಾಕ್ಸಿನೇಷನ್/ಪೇಷೆಂಟ್ ಶಿಫ್ಟಿಂಗ್‌ನ್ನು ವಾರ್ಡ್ ಮಟ್ಟದಲ್ಲಿ ಸಂಪರ್ಕಾಧಿಕಾರಿಗಳ ಹೆಸರು ಮತ್ತು ದೂರವಾಣಿ ಸಂಖ್ಯೆ/ ವಿಳಾಸ/ ವಾರ್ಡ್ ವಾರ್ ರೂಂ/ಮೊಬೈಲ್ ಸಂಖ್ಯೆಗಳನ್ನು ನೀಡಬೇಕಾಗಿ ವಸತಿ ಸಮುಚ್ಚಯಗಳಲ್ಲಿ ಸ್ವಾಬ್ ಟೆಸ್ಟಿಂಗ್ ಸಹಕರಿಸದೆ ಇರುವ ಸಾರ್ವಜನಿಕರಿಗೆ ಸಂಬಂಧಪಟ್ಟ ಪೋಲೀಸ್ ಅಧಿಕಾರಿಗಳನ್ನು ಪ್ರತ್ಯೇಕವಾಗಿ ಈ ವಾರ್ಡ್‌ಗೆ ನಿಯೋಜಿಸಲು ಹಾಗೂ Volunteer Group ಗಳನ್ನು ನಿಯೋಜಿಸಲು ಕೋರಿರುತ್ತಾರೆ. ಕೆಲವು ವಸತಿ ಸಮುಚ್ಚಯಗಳಿಗೆ ಕೋವಿಡ್ ಕೇಸಸ್ ಹೆಚ್ಚಾಗಿರುವ ಪ್ರಕರಣಗಳಿಗೆ ಕಂಟೈನ್‌ಮೆಂಟ್ ಜೋನ್ ಸ್ಥಾಪಿಸಲು ವ್ಯವಸ್ಥೆ ಮಾಡಲು ಕೋರಿರುತ್ತಾರೆ.

ಪು.ತಿ.ನೋ

ಹಾಗೂ ವಸತಿ ಸಮುಚ್ಚಯದಲ್ಲಿ ಸ್ವ್ಯಾಬ್ ಟೆಸ್ಟಿಂಗ್ ಕೆಲಸ ಕಾರ್ಯಗಳನ್ನು ನಿಯೋಜಿಸಿದ್ದಲ್ಲಿ ಅಲ್ಲಿರುವ ಸಾರ್ವಜನಿಕರು ಆಯಾ ವಸತಿಯೇತರ ಮನೆ ಕೆಲಸದವರು, ಡ್ರೈವರ್, ಸೆಕ್ಯೂರಿಟಿ, ಇತ್ಯಾದಿ ನೌಕರರಿಗೆ ಮಾತ್ರ ಸ್ವ್ಯಾಬ್ ಟೆಸ್ಟಿಂಗ್‌ಗಳನ್ನು ಮಾಡಿಸಿದ್ದು, ಮನೆಯ ಮಾಲೀಕರು ಹಾಗೂ ಅಪಾರ್ಟ್‌ಮೆಂಟ್ ನಿವಾಸಿಗಳು ಯಾರೂ ಸಹ ಸ್ವ್ಯಾಬ್ ಟೆಸ್ಟಿಂಗ್ ಸಹಕರಿಸುತ್ತಿರುವುದಿಲ್ಲ. ಆದುದರಿಂದ ಬಿಬಿಎಂಪಿ ವತಿಯಿಂದ ಮೇಲಾಧಿಕಾರಿಗಳ ವತಿಯಿಂದ ಪ್ರತ್ಯೇಕವಾಗಿ ಪತ್ರ/ಅಧಿಸೂಚಿತ/ಆದೇಶ ನೀಡಿದ್ದಲ್ಲಿ ಇತರೆ ವಸತಿ ಸಮುಚ್ಚಯದ ಆರ್.ಡಬ್ಲ್ಯೂ.ಎ ರವರೊಂದಿಗೆ ಚರ್ಚಿಸಲು ಅನುಕೂಲವಾಗುತ್ತದೆ ಎಂದು ಸಭೆಯಲ್ಲಿ ತಿಳಿಸಿದರು.

<u>ಶ್ರೀಮತಿ.ಸಿಂಧು ಬಂಜಾರ ಲೇಔಟ್ **(Volunteer)**:-</u> ಇವರು ಮಾತನಾಡುತ್ತಾ ಬಿಬಿಎಂಪಿ ವತಿಯ Triage Centre/Covid care Centre ರವರ ಅಧಿಕಾರಿ/ಸಿಬ್ಬಂಧಿ ಸಂಪರ್ಕ ಸಂಖ್ಯೆಗಳು ನೀಡಿದ್ದಲ್ಲಿ ಇಲ್ಲಿರುವ ನಿವಾಸಿಗಳಿಗೆ ಕೋವಿಡ್-ನಿರ್ವಹಣಾ ಹಾಗೂ ಶುಶ್ರೂಷೆ ಪಡೆಯಲು ಅನುಕೂಲವಾಗುವುದಾಗಿ ತಿಳಿಸಿರುತ್ತಾರೆ. ಕೆಲವೊಮ್ಮೆ ವಸತಿ ಸಮುಚ್ಚಯಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮನೆ ಕೆಲಸದವರು, ಡ್ರೈವರ್, ಸೆಕ್ಯೂರಿಟಿ, ಇನ್ನಿತರೆ ಸಂಪರ್ಕದಿಂದಾಗಿ ಹೆಚ್ಚಿನ ಕೋವಿಡ್ ಪ್ರಕರಣಗಳು ಹೆಚ್ಚಾಗುತ್ತಿದ್ದು, ಇನ್ನು ಕೆಲವರು ಕೋವಿಡ್ ಸ್ವ್ಯಾಬ್ ಟೆಸ್ಟ್‌ಗಳನ್ನು ಮಾಡಿಸುವುದು ನಿರಾಕರಿಸಿ, Symptomsಗಳು ಇದ್ದರೂ ಸಹ ನಿರ್ಲಕ್ಷಿಸಿರುತ್ತಾರೆ. ಇಂತಹ ಪ್ರಕರಣಗಳು ಯಾವ ರೀತಿ ಕ್ರಮ ಕೈಗೊಳ್ಳಬೇಕು. ಇವರೊಂದಿಗೆ ಪ್ರೈಮರಿ ಕಾಂಟ್ಯಾಕ್ಟ್ ಪರ್ಸನ್‌ಗಳಿಗೂ ಸಹ ಕೋವಿಡ್ ಟೆಸ್ಟ್ ಮಾಡಬೇಕು ಎಂದು ತಿಳಿಸಿರುತ್ತಾರೆ. ಇಲ್ಲಿನ ಲೇಔಟ್ ಕೆಲವು ಕಡೆ ಸ್ಯಾನಿಟೇಷನ್‌ನ ಕೆಲಸಗಳು ನಡೆದಿದ್ದು, ಇನ್ನು ಸುಮಾರು ಕಡೆ ಕೆಲಸ ನಡೆದಿರುವುದಿಲ್ಲ. ಆದುದರಿಂದ ಧೂಮಿಕರಣ ಮಾಡಿಸಿದ್ದಲ್ಲಿ ಸಾರ್ವಜನಿಕರಿಗೆ ಆರೋಗ್ಯಕರ ವಾತಾವರಣ ಆಗುತ್ತದೆ ಎಂದು ಅನಿಸಿಕೆ ನೀಡಿರುತ್ತಾರೆ.

<u>ಕ್ರಮ:- ಶ್ರೀ.ಸಂಜಯ್ ಹಿರಿಯ ಆರೋಗ್ಯ ಪರಿವೀಕ್ಷಕರು:-</u> ರವರು ಮಾತನಾಡುತ್ತಾ ಬಿಬಿಎಂಪಿ ವತಿಯಿಂದ ಪ್ರತ್ಯೇಕ ವಾರ್ಡ್‌ವಾರು 100-150 ಪ್ರೈಮರಿ ಕಾಂಟ್ಯಕ್ಟ್ ಪರ್ಸನ್‌ಗಳಿಗೆ ವಸತಿ ಸಮುಚ್ಚಯಗಳಲ್ಲಿ ಸ್ವ್ಯಾಬ್ ಟೆಸ್ಟಿಂಗ್ ಮಾಡಲಾಗುತ್ತಿದೆ. ವಸತಿ ಸಮುಚ್ಚಯದಲ್ಲಿ ಆಯಾ ವಸತಿಯೇತರ ಮನೆ ಕೆಲಸದವರು, ಡ್ರೈವರ್, ಸೆಕ್ಯೂರಿಟಿ, ಇತ್ಯಾದಿ ನೌಕರರಿಗೆ ಮಾತ್ರವೇ ಸ್ವ್ಯಾಬ್ ಟೆಸ್ಟಿಂಗ್‌ಗಳನ್ನು ಮಾಡಿಸಿದ್ದು, ಮನೆಯ ಮಾಲೀಕರು ಹಾಗೂ ಅಪಾರ್ಟ್‌ಮೆಂಟ್ ನಿವಾಸಿಗಳು ಪ್ರತಿಯೊಬ್ಬರು ಸಹ ಸ್ವ್ಯಾಬ್ ಟೆಸ್ಟಿಂಗ್ ಮಾಡಿಕೊಳ್ಳಬೇಕು. ಹಾಗೂ ಇನ್ನು ಕೆಲವರು ರೋಗಲಕ್ಷಣಗಳು ಇದ್ದರೂ ಸಹ ಸ್ವ್ಯಾಬ್ ಟೆಸ್ಟಿಂಗ್ ನಿರಾಕರಿಸಿದ್ದಲ್ಲಿ ಅವರ ವಿವರಗಳನ್ನು ಸಲ್ಲಿಸಿದ್ದಲ್ಲಿ ಅವರ ವಿರುದ್ಧ ಎಫ್.ಐ.ಆರ್ ಫೈಲ್ ಮಾಡಬಹುದಾಗಿದೆ ಎಂದು ಸೂಚಿಸಿದರು.

<u>ಶ್ರೀ.ಅಬ್ರಾಹಿಂ ಜೆಟ್ ಶ್ರೀ ಸಾಯಿ ಲೇಔಟ್:-</u> ರವರು ಮಾತನಾಡಿ ಈ ಬಡಾವಣೆಯಲ್ಲಿ Manual Sanitization ಕೆಲಸ ನಡೆಯುತ್ತಿದ್ದು, Jet Machine Spraying ಮಾಡಿಸಲು ಶ್ರೀ.ಸಂಜಯ್ ಹಿರಿಯ ಆರೋಗ್ಯ ಪರಿವೀಕ್ಷಕರಿಗೆ ತಿಳಿಸಿದರು.

<u>ಕ್ರಮ:-</u> ಹಿರಿಯ ಆರೋಗ್ಯ ಪರಿವೀಕ್ಷಕರು ಮಾತನಾಡಿ ಮುಂಬರುವ ವಾರದಲ್ಲಿ ಸದರಿ ಬಡಾವಣೆಗೆ ಖಠಿಡಿಚಿಥಿಟಿಂ ಮಾಡಿಸುವುದಾಗಿ ತಿಳಿಸಿದರು.

<u>ಶ್ರೀ.ದಾಮೋದರನ್ ಸರ್.ಎಂ.ವಿ ನಗರ ರೆಸಿಡೆನ್ಶಿಯಲ್ ವೆಲ್‌ಫೇರ್ ಅಸೋಸಿಯೇಷನ್:-</u> ರವರು ಮಾತನಾಡಿ ಸದರಿ ವಾರ್ಡಿನ ಸರ್.ಎಂ.ವಿ ನಗರ ಬಡಾವಣೆಗಳಲ್ಲಿ ಸ್ಯಾನಿಟೈಜೇಷನ್ ಹಾಗೂ 18 ರಿಂದ 44 ವರ್ಷಗಳ ವಯೋಮಾನದವರಲ್ಲಿ ಆದ್ಯತೆ ಗುಂಪುಗಳನ್ನು ಗುರುತಿಸಿ ಕೋವಿಡ್-19 ಲಸಿಕೆ ಹಾಕುತ್ತಿದ್ದು, ಈ ವಾರ್ಡ್‌ನ ಸ್ಥಳೀಯ ನಿವಾಸಿಗಳಿಗೆ ಮಾಹಿತಿಗಳನ್ನು ಒದಗಿಸಲು ಕೋರಿರುತ್ತಾರೆ.
ಕ್ರಮ:- ಹಿರಿಯ ಆರೋಗ್ಯ ಪರಿವೀಕ್ಷಕರು ರವರಿಗೆ ಈ ಕುರಿತು ಕ್ರಮವಹಿಸಲು ಸಭೆಯು ಸೂಚಿಸಲಾಯಿತು.

ಶ್ರೀ.ನೋಡಲ್ ಅಧಿಕಾರಿಗಳು:- ರವರು ಮಾತನಾಡಿ ಎಲ್ಲಾ ನಿವಾಸಿಗಳು ಆರ್.ಡಬ್ಲ್ಯೂ.ಎ ರೆಸಿಡೆನ್ಸ್ ವೆಲ್‌ಫೇರ್ ಅಸೋಸಿಯೇಷನ್ ರವರುಗಳು ತಮ್ಮ ಅಧೀನದ ಅಕ್ಕ-ಪಕ್ಕ ನಿವಾಸಿಗಳಿಗೆ ಮನೆ ಕೆಲಸದವರು, ಡ್ರೈವರ್, ಸೆಕ್ಯೂರಿಟಿ, ಇನ್ನಿತರೆ ನಿವಾಸಿಗಳಿಗೆ ಸ್ವ್ಯಾಬ್ ಟೆಸ್ಟಿಂಗ್/ಲಸಿಕೆ ಹಾಕಿಸುವ ಬಗ್ಗೆ ಅರಿವು ಮೂಡಿಸಿ, ಜಾಗೃತ ಕ್ರಮ ಕೈಗೊಳ್ಳಬೇಕು. ಹಾಗೂ ವಸತಿ ಸಮುಚ್ಚಯಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಸಿಬ್ಬಂಧಿಗಳು ಕೈಜೋಡಿಸಿ ಮುಂಜಾಗ್ರತ ಕ್ರಮ ವಹಿಸಿ ಕೋವಿಡ್ ಹರಡುವಿಕೆ ತಡೆಗಟ್ಟಲು ಕ್ರಮ ವಹಿಸಬೇಕು ಎಂದು ಸೂಚಿಸಿರುತ್ತಾರೆ. ಹಾಗೂ ವಸತಿ ಸಮುಚ್ಚಯಗಳಲ್ಲಿ ಕಾಲಕಾಲಕ್ಕೆ ಸರ್ಕಾರದ ಕಡ್ಡಾಯವಾದ ಮಾಹಿತಿಗಳು/ಆದೇಶಗಳನ್ನು ನೀಡುವುದಾಗಿ ತಿಳಿಸಿರುತ್ತಾರೆ.

ಸಭೆಯನ್ನು ಮುಕ್ತಾಯಗೊಳಿಸುವ ಸಲುವಾಗಿ ಕೊನೆಯದಾಗಿ ನುರಿತ ಸಲಹೆ ಸೂಚನೆಗಳನ್ನು ಚರ್ಚಿಸಿದ್ದಕ್ಕೆ ಧನ್ಯವಾದಗಳನ್ನು ತಿಳಿಸುತ್ತಾ, ವಾರ್ಡ್‌ನ್ನು ಸಮಗ್ರವಾಗಿ ಅಭಿವೃದ್ಧಿಪಡಿಸುವ ಬಗ್ಗೆ ವಾರ್ಡ್ ಮಟ್ಟದಲ್ಲಿ ಕಾರ್ಯಯೋಜನೆಯನ್ನು ರೂಪಿಸಿಕೊಂಡು ಕ್ರಮವಹಿಸುವುದಾಗಿ ತಿಳಿಸುತ್ತಾ, ವಂದನೆಗಳೊಂದಿಗೆ ನೋಡಲ್ ಅಧಿಕಾರಿಗಳ ಅಪ್ಪಣೆ ಮೇರೆಗೆ ಸಭೆಯನ್ನು ಮುಕ್ತಾಯಗೊಳಿಸಿದರು.

ನೋಡಲ್ ಅಧಿಕಾರಿ ವಾರ್ಡ್ ನಂ.25
ಹಾಗೂ ಉಪ ಆಯುಕ್ತರು
ಮಹದೇವಪುರ ವಲಯ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಿರಿಯ ಅಭಿಯಂತರರು
ಹೊರಮಾವು ವಾರ್ಡ್ ನಂ.25
ಬಿ.ಬಿ.ಎಂ.ಪಿ